# ಬುತ್ತಿ ಚಿಗುರು

## ವಜಾ

ಗುಮಾಸ್ತ ಕುಮಾರನಿಗೆ ಅವನ ಬಾಸ್ ತುಂಬಾನೇ ಕಿರಿಕಿರಿ ಮಾಡ್ತಿದ್ದ. ಹೇಗೆ ಕೆಲಸ ಮಾಡಿದರೂ ಬಾಸ್‌ಗೆ ಸಮಾಧಾನ ಎನ್ನುವುದೇ ಇರಲಿಲ್ಲ. ಒಂದಿನ ಆರಾಮಾಗಿ ಕುಳಿತಿದ್ದ ಬಾಸ್, ಕುಮಾರನನ್ನು ಕರೆದು ಕೇಳಿದ, 'ಕುಮಾರ, ನಾನು ನಿನ್ನನ್ನು ಒಂದು ಪ್ರಶ್ನೆ ಕೇಳಲೇ?' ಎಂದು. 'ಕೇಳಿ ಸಾರ್' ಎಂದ ವಿನೀತನಾಗಿ. 'ಒಂದು ವೇಳೆ ನಾನೇ ಗುಮಾಸ್ತನಾಗಿ, ನೀನೇ ಬಾಸ್ ಆಗಿದ್ರೆ ನೀನು ಏನು ಮಾಡ್ತಿದ್ದೆ?' ಎಂದ. 'ಮೊದಲು ನಿಮ್ಮನ್ನ ಕೆಲಸದಿಂದ ತೆಗೆದು ಬಿಸಾಕಿ, ಬೇರೆಯವನನ್ನ ನೇಮಿಸಿಕೊಳ್ತಾ ಇದ್ದೆ ಸಾರ್' ಅಷ್ಟೇ ಗಂಭೀರನಾಗಿ ಹೇಳಿದ ಕುಮಾರ.

**ಶಂಕರೇಗೌಡ ತುಂಬಕೆರೆ**





## ಕೊಡುವುದೇ ಪ್ರೀತಿ

ಮೇಷ್ಟ್ರು ದಾನಶೂರ ಕರ್ಣನ ಕಥೆ ಹೇಳಿ, 'ಮಕ್ಕಳೇ, ನಿಮಗೂ ತೆಗೆದುಕೊಳ್ಳುವುದಕ್ಕಿಂತ ಕೊಡುವುದೇ ಹೆಚ್ಚು ಇಷ್ಟವಾಗಬೇಕಲ್ಲವೆ?' ಎಂದು ಕೇಳಿದರು. ಹನುಮಂತ ಎದ್ದು ನಿಂತು, 'ಹೌದು ಸರ್, ನನ್ನ ತಂದೆ ಯಾವಾಗಲೂ ಈ ಮಾತನ್ನು ಹೇಳುತ್ತಲೂ, ಅದನ್ನೇ ಅನುಸರಿಸುತ್ತಲೂ ಇರುತ್ತಾರೆ' ಎಂದ. 'ಶಹಭಾಶ್, ನಿನ್ನ ತಂದೆ ತುಂಬ ವಿವೇಕಶಾಲಿ ಅನಿಸುತ್ತೆ. ಅವರು ಏನು ಕೆಲಸ ಮಾಡುತ್ತಾರೆ?' ಎಂದು ಮೇಷ್ಟ್ರು ಕೇಳಿದರು. 'ಅವರು ಬಾಕ್ಸಿಂಗ್ ಆಡುತ್ತಾರೆ ಸರ್' ಎಂದ ಹನುಮಂತ. ಮೇಷ್ಟ್ರು ತಬ್ಬಿಬ್ಬು.

**ಪ.ರಾಮಕೃಷ್ಣ ಶಾಸ್ತ್ರಿ**